ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು ಪ್ರಥಮ ವರ್ಗ ಗೋಕಾಕ ಇವರ ನ್ಯಾಯಾಲಯ
ಸಾಃ ಗೋಕಾಕ

**ಸಿ.ಸಿ. ನಂಬರ 889/2020**

ಆರೋಪಿತನ ಹೆಸರುಃ **1)** ರಾಯಪ್ಪ ಲಕ್ಕಪ್ಪ ಕೆಮ್ಮನಕೋಲ,
ಸಾಃ ಕಲಾರಕೊಪ್ಪ ತಾಃ ಗೋಕಾಕ

**<u>ಆಪಾದನೆ</u>**

ಮೊದಲನೇಯದಾಗಿ, ದಿನಾಂಕ **27-10-2019** ರಂದು ಮುಂಜಾನೆ 11-30 ಗಂಟೆ ಸುಮಾರಿಗೆ ಕುಲಗೋಡ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಸಜ್ಜಿಹಾಳ ಗ್ರಾಮ ಹದ್ದಿಯಲ್ಲಿ ಕೌಜಲಗಿ-ಗೋಕಾಕ ಸಾರ್ವಜನಿಕ ರಸ್ತೆಯ ಮೇಲೆ ಸಜ್ಜಿಹಾಳ ಕ್ರಾಸ ಹತ್ತಿರ ಆರೋಪಿತನಾದ ನೀನು ನಡೆಸುತ್ತಿದ್ದ ಕ್ರೂಷರ ಗಾಡಿ ನಂ.ಕೆಎ-33/ಎಮ್-0592 ನೇದ್ದನ್ನು ಹಡಗಿನಾಳ ಕ್ರಾಸ ಕಡೆಯಿಂದ ಸಜ್ಜಿಹಾಳ ಕ್ರಾಸ ಕಡೆಗೆ ಅತೀವೇಗದಿಂದ ಮತ್ತು ದುಡಿಕಿನಿಂದ ಮತ್ತು ನಿಷ್ಕಾಳಜಿತನದಿಂದ ಮತ್ತು ಮಾನವೀಯ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿ ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡಿ ನಡೆಯುತ್ತ ರಸ್ತೆ ದಾಟುತ್ತಿದ್ದ ಮೃತ ಸಿದ್ದಪ್ಪ ಅರ್ಜುನ ನಾಯಿಕ ಇವನಿಗೆ ಸದರಿ ಕ್ರೂಷರ ಗಾಡಿ ಹಾಯಿಸಿ ಅಪಘಾತ ಪಡಿಸಿ ಅಪರಾಧ ಕಲಂ 279 ಐಪಿಸಿ ರಡಿಯಲ್ಲಿ ಅಪರಾಧ ಮಾಡಿರುವಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಡೆಸುತ್ತಿದ್ದ ಕ್ರೂಷರ ಗಾಡಿಯನ್ನು ನಡೆಸಿಕೊಂಡು ಹೋಗಿ ಮೃತ ಸಿದ್ದಪ್ಪ ಅರ್ಜುನ ನಾಯಿಕ ಇವರಿಗೆ ಹಾಯಿಸಿ ಅಪಘಾತಪಡಿಸಿ ಭಾರಿಗಾಯಪಡಿಸಿ ಉಪಚಾರ ಫಲಿಸದೆ ಮೃತಪಟ್ಟಿದ್ದು ಅಪರಾಧ ಕಲಂ. 304(ಎ) ಐಪಿಸಿ ರಡಿಯಲ್ಲಿ ಅಪರಾಧ ಮಾಡಿರುವಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಡೆಸುತ್ತಿದ್ದ ವಾಹನವನ್ನು ಅಪಘಾತ ಪಡಿಸಿ ಸದರಿ ಅಪಘಾತದ ವಿಷಯವನ್ನು ಪೋಲಿಸ್ ಠಾಣೆಗೆ ತಿಳಿಸದೇ ಹೋಗಿದ್ದು ಅಪರಾಧ ಕಲಂ 134 ಸಹಕಲಂ 187 ಎಂ ವಿ ಆಕ್ಟ ರಡಿಯಲ್ಲಿ ಅಪರಾಧ ಮಾಡಿರುವಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಡೆಸುತ್ತಿದ್ದ ಕ್ರೂಷರ ಗಾಡಿ ನಂ.ಕೆಎ-33/ಎಮ್-0592 ನೇದ್ದಕ್ಕೆ ವಾಹನ ಚಾಲನಾ ಪ್ರಮಾಣ ಪತ್ರ ಹೊಂದದೇ ನಡೆಸಿ ಅಪಘಾತ ಪಡಿಸಿ ಅಪರಾಧ ಕಲಂ 3 ಸಹ ಕಲಂ 181 ಎಮ್. ವಿ ಆಕ್ಟರಡಿ ಅಪರಾಧ ಮಾಡಿರುವಿ

ಪ್ರಶ್ನೆ:1ಃ ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಶ್ನೆ:**2**ಃ ನೀನು ಗುನ್ಹಾ ಕಬೂಲಿ ಆಗುವಿಯೋ ಅಥವಾ ವಿಚಾರಣೆ ಆಗಬೇಕೋ**?**

ಉಃ

**(**ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವನಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ**)**

ಸ್ಥಳಃ ಗೋಕಾಕ

ದಿಃ **20-04-2022** ಹೆ.ದಿ. **&** ನ್ಯಾ.ದಂ.ಪ್ರ.ವರ್ಗ**,** ಗೋಕಾಕ**.**